5. ವಾಹನ ಸಂಚಾರ ನಿಯಮಾವಳಿಗಳನ್ನು, ಕರಪತ್ರಗಳಲ್ಲಿ ಮುದ್ರಣಗೊಳಿಸಿ ಸಾರ್ವಜನಿಕರಿಗೆ ಹಂಚಲಾಗುತ್ತಿದೆ.
6. ವಾಹನ ಸಂಚಾರದ ಸಂಕೇತಗಳನ್ನು ಮುಖ್ಯವಾದ ರಸ್ತೆ, ಜಂಕ್ಷನ್ಗಳಲ್ಲಿ ಅಳವಡಿಸಲಾಗಿದೆ.
7. ಬೆಳಿಗ್ಗೆ 3 ಗಂಟೆಯಿಂದ 5ರವರೆಗೆ ಟ್ರಕ್ಗಳ ಸಂಚಾರವನ್ನು ಕಡ್ಡಾಯವಾಗಿ ನಿಷೇದಿಸಲಾಗಿದೆ.

ಖೈದಿಗಳ ಜೀವಾವಧಿ ಶಿಕ್ಷೆಯನ್ನು ಇಳಿಸುವ ಬಗ್ಗೆ

170 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಿವಿಧ ಕಾರಾಗೃಹಗಳಲ್ಲಿ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವವರ ಸಂಖ್ಯೆ ಎಷ್ಟು?

ಆ) ಈ ಜೀವಾವಧಿ ಶಿಕ್ಷೆಯ ಅವಧಿಯನ್ನು 14 ವರ್ಷದಿಂದ 10 ವರ್ಷಕ್ಕೆ ಇಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಇ) ಹಾಗಿದ್ದಲ್ಲಿ, ಜೀವಾವಧಿ ಶಿಕ್ಷೆಯ ಅವಧಿಯನ್ನು ಇಳಿಸಲು ಕಾರಣಗಳೇನು?

ಈ) ಜೀವಾವಧಿ ಶಿಕ್ಷೆಯ ಅವಧಿಯನ್ನು 14ರಿಂದ 10 ವರ್ಷಕ್ಕೆ ಇಳಿಸುವುದರಿಂದ ಎಷ್ಟು ಖೈದಿಗಳು ಬಿಡುಗಡೆ ಹೊಂದಲಿದ್ದಾರೆ.

ಉ) ಇದರ ಬಗ್ಗೆ ಸರ್ಕಾರದ ಅಂತಿಮ ತೀರ್ಮಾನ ಯಾವಾಗ ಕೈಗೊಳ್ಳುವುದು?

ಊ) ಖೈದಿಗಳ ಆಹಾರಕ್ಕಾಗಿ ಸರ್ಕಾರದವರು ವಾರ್ಷಿಕ ಎಷ್ಟು ಹಣವನ್ನು ಖರ್ಚು ಮಾಡುತ್ತಿರುವರು.

ಶ್ರೀ ಎನ್ ಮಿರಾಜುದ್ದೀನ್ ಪಾಟೀಲ್, ಕಾರಾಗೃಹಗಳ ರಾಜ್ಯ ಸಚಿವರು :

ಅ) ದಿನಾಂಕ 5.8.95ರವರೆಗೆ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ಖೈದಿಗಳು

ಪುರುಷರು	ಮಹಿಳೆಯರು	ಒಟ್ಟು
817	15	832

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ದಿನಾಂಕ 5.8.95ರವರೆಗೆ, 14ರಿಂದ 10 ವರ್ಷಕ್ಕೆ ಇಳಿಸುವುದರಿಂದ ಬಿಡುಗಡೆ ಹೊಂದುವ ಖೈದಿಗಳ ಸಂಖ್ಯೆ :

ಪುರುಷರು	ಮಹಿಳೆಯರು	ಒಟ್ಟು
212	6	218

ಉ) ಉದ್ಭವಿಸುವುದಿಲ್ಲ.

ಊ) 1994-95ನೇ ಸಾಲಿನ ಹಣಕಾಸು ವರ್ಷದಲ್ಲಿ ಒಟ್ಟು 3 ಕೋಟಿ 5ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಬೆಂಗಳೂರಿನಲ್ಲಿ ಲಾ ಚೇಂಬರ್ಸ್ ನಿರ್ಮಾಣ

155 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ಉಚ್ಚ ನ್ಯಾಯಾಲಯದ ಬಳಿ ಲಾ ಚೇಂಬರ್ಸ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದವರ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ, ಮುಖ್ಯಮಂತ್ರಿಗಳು

ಅ) ಹೌದು.

ಆ) ಲಾ ಚೇಂಬರ್ಸ್‌ನ್ನೂ ಸೂಕ್ತವಾದ ಸ್ಥಳದಲ್ಲಿ ನಿರ್ಮಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರು ಮೆಗಾಸಿಟಿ ಯೋಜನೆ

171 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮೆಗಾಸಿಟಿ ಯೋಜನೆಗಳನ್ನು ಕೇಂದ್ರ ಸರ್ಕಾರದವರ ನೆರವಿನಿಂದ ಜಾರಿಗೊಳಿಸುತ್ತಿರುವುದು ನಿಜವೇ.

ಆ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರದವರು ಇದಕ್ಕಾಗಿ 1994-95ರ ಸಾಲಿನಲ್ಲಿ ನೀಡಿರುವ ಹಣವೆಷ್ಟು?

ಇ) ರಾಜ್ಯ ಸರ್ಕಾರದವರು 1994-95ರ ಸಾಲಿನಲ್ಲಿ ಇದಕ್ಕಾಗಿ ನೀಡಿದ ಹಣವೆಷ್ಟು?

ಈ) ಈ ಯೋಜನೆಯ ಸಂಪೂರ್ಣ ವೆಚ್ಚವೆಷ್ಟು?

ಉ) ಈ ಯೋಜನೆಯ ಶೇಕಡಾ 50ರಷ್ಟು ಹಣವನ್ನು ಹುಡ್ಕೋ ಸಂಸ್ಥೆಯವರು ನೀಡಲು ಮುಂದೆ ಬಂದಿರುವರೇ?

ಊ) ಈ ಯೋಜನೆಯಡಿಯಲ್ಲಿ ಯಾವ ಯಾವ ಸೌಲಭ್ಯಗಳನ್ನು ಬೆಂಗಳೂರಿನಲ್ಲಿ ಒದಗಿಸಲಾಗುವುದು?

ಎ) ಈಗಾಗಲೇ ಒದಗಿಸಿರುವ ಸೌಲಭ್ಯಗಳ ವಿವರ ನೀಡುವುದು?

ಏ) 1995-96ನೇ ಸಾಲಿನಲ್ಲಿ ರಾಜ್ಯ ಸರ್ಕಾರದವರು ಈ ಯೋಜನೆಗೆ ಇಟ್ಟಿರುವ ಹಣವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ, ಮುಖ್ಯಮಂತ್ರಿಗಳು :

ಅ) ಹೌದು.

ಆ) 20.10 ಕೋಟಿ ರೂ.ಗಳು

ಇ) 20 ಕೋಟಿ ರೂ.ಗಳು

ಈ) 1996-97ರಿಂದ ಎಂಟನೇ ಪಂಚವಾರ್ಷಿಕ ಯೋಜನೆಯ ಅಂತ್ಯದವರೆಗೆ 250 ಕೋಟಿ ರೂ.ಗಳು ಅಂದಾಜು.

ಉ) ಹೌದು

ಊ) ನೀರು ಸರಬರಾಜು, ಹಳೇ ಪೈಪುಗಳ ಬದಲಾವಣೆ ವಾಣಿಜ್ಯ ಸಂಕೀರ್ಣ ನಿರ್ಮಾಣ, ಪಾದಾಚಾರಿಗಳ ಉಪದಾಟುಗಳು, ಮೇಲುರತ್ತೆ, ಕೊಳಚೆ ನಿರ್ಮೂಲನೆ, ಲಾರಿ ತಂಗುದಾಣ, ಸಂಚಾರ ಚಿನ್ನೆಯ ವ್ಯವಸ್ಥೆ ಮತ್ತಿತರ ಮೂಲ ಸೌಕರ್ಯಗಳನ್ನು ಉತ್ತಮಪಡಿಸುವಿಕೆ ಇತ್ಯಾದಿ.

ಎ) ನಂದಿನಿ ಬಡಾವಣೆ ಮತ್ತು ಜೆ.ಪಿ. ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ವಾಣಿಜ್ಯ ಸಂಕೀರ್ಣ ನಿರ್ಮಾಣ, ಹೊಸೂರು ರಸ್ತೆಯಲ್ಲಿ ಲಾರಿಗಳ ತಂಗುದಾಣ, ಕಬ್ಬಿಣ ಮತ್ತು ಉಕ್ಕು ಮಾರುಕಟ್ಟೆಯ ಸ್ಥಳಾಂತರ, ಕೆಂಪಾಂಬುಧಿ,